ಭೀಮಾನದಿಯ ನೀರನ್ನು ಉಪಯೋಗ ಏತಕ್ಕೆ ಪಡೆಯುತ್ತಿಲ್ಲವೆಂದು ನಾನು ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಅಲ್ಲಿ ದೊಡ್ಡ ದೊಡ್ಡ ಹಳ್ಳಿಗಳಿಗೆ ನೀರು ಸರಬರಾಜು ಇಲ್ಲ.

ಶ್ರೀ ಎಸ್. ಎ. ರವೀಂದ್ರನಾಥ್ :– ಅಲ್ಲಿ ಎಲ್ಲಿ ನೀರು ಸಿಗುವುದಿಲ್ಲ. ನೀರು ಸಿಗದೆ ಇರುವಂತಹ ಕಡೆಗೆ ಟ್ಯಾಂಕರ್‌ನಿಂದ ನೀರು ಕೊಡುವಂತಹ ಪರ್ಯಾಯ ವ್ಯವಸ್ಥೆಯೇ ಹೊರತು ಅಲ್ಲಿ ಯಾವುದೇ ರೀತಿಯ ಬೋರ್‌ನ್ನು ರೀಬೋರ್ ಮಾಡಿದರೂ ಕೂಡ ಆಗುತ್ತಿಲ್ಲ. ಯಾವುದೇ ರೀತಿಯಿಂದಲೂ ಇಲ್ಲಿ ನೀರು ಇಲ್ಲದೆ ಇರುವುದರಿಂದ ಬೇರೆ ಅನಿವಾರ್ಯವಾಗಿರುವಂತಹ ಪರಿಸ್ಥಿತಿಯಾಗಿದೆ. ಆದ್ದರಿಂದ ಟ್ಯಾಂಕರ್‌ನಿಂದ ನೀರು ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಉಪಾಧ್ಯಕ್ಷರು :– ಈಗ ಮಾನ್ಯ ಪಾಟೀಲರನ್ನು ನಿಮ್ಮ ಛೇಂಬರಿಗೆ ಕರೆಸಿಕೊಂಡು ಅವರಿಗೆ ಸ್ವಲ್ಪ ಕನ್‌ವಿನ್ಸ್ ಮಾಡಬೇಕು. ಮಾನ್ಯ ಪಾಟೀಲ್‌ರವರೆ, ನಾನು ನಿಮ್ಮ ಪರವಾಗಿ ಹೇಳಿದ್ದೇನೆ. ನೀವು ನಾಳೆ ಬೆಳಿಗ್ಗೆ ಅವರ ರೂಮಿಗೆ ಹೋಗಿ ಮಾತನಾಡಿ.

ಶ್ರೀ ಹೆಚ್. ನಿಂಗಪ್ಪ :– 10 ಸಾವಿರ ಇರುವ ಜನಸಂಖ್ಯೆಗೆ ಟ್ಯಾಂಕರ್‌ನಿಂದ ನೀರನ್ನು ಹೇಗೆ ಸಪ್ಲೈ ಮಾಡುವುದಕ್ಕಾಗುತ್ತದೆ?

ಉಪಾಧ್ಯಕ್ಷರು :– ಮಾನ್ಯ ಸಚಿವರು ಅವರನ್ನು ನಾಳೆ ಬೆಳಿಗ್ಗೆ ಕರೆಸಿಕೊಂಡು ಮಾತನಾಡಿ.

ಸುವರ್ಣ ಗ್ರಾಮೋದಯದಡಿ ಹಳ್ಳಿಗಳನ್ನು ಆಯ್ಕೆ ಮಾಡುವುದು

2223 ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ (ಗುಳೇದಗುಡ್ಡ) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುವರ್ಣ ಗ್ರಾಮೋದಯ ಯೋಜನೆಯಡಿಯಲ್ಲಿ ಗುಳೇದಗುಡ್ಡ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳನ್ನು ಸೇರಿಸಲಾಗಿದೆ (ಆಯ್ಕೆಯಾದ ಗ್ರಾಮಗಳ ವಿವರ ಒದಗಿಸುವುದು);

ಆ) ಸುವರ್ಣ ಗ್ರಾಮೋದಯ ಯೋಜನೆಯಡಿ ಯಾವ ಆಧಾರದ ಮೇಲೆ ಗುರುತಿಸಿ ಪಟ್ಟಿಗೆ ಸೇರಿಸಲಾಗಿದೆ (ಸಂಪೂರ್ಣ ವಿವರ ನೀಡುವುದು)

ಇ) ಈ ಯೋಜನೆಯಡಿಯಲ್ಲಿ ಗುರುತಿಸಲಾದ ಹಳ್ಳಿಗಳಿಗೆ ಎಷ್ಟು ಹಣವನ್ನು (ಅನುದಾನ) ನಿಗದಿಪಡಿಸಲಾಗಿದೆ; (ಕ್ಷೇತ್ರವಾರು ವಿವರ ನೀಡುವುದು);

ಈ) ಸುವರ್ಣ ಗ್ರಾಮೋದಯ ಯೋಜನೆ ಈ ಕ್ಷೇತ್ರದಲ್ಲಿ ಗ್ರಾಮಗಳ ಆಯ್ಕೆ ಕಡಿಮೆ ಮಾಡಲು ಕಾರಣವೇನು?

ಉ) ಇದರಲ್ಲಿ, ರಾಜಕೀಯ ತಾರತಮ್ಯ ಏನಾದರೂ ಮಾಡಲಾಗಿದೆಯೇ (ಕಾರಣ ತಿಳಿಸಿ?

ಶ್ರೀ ಸಿ. ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

ಅ) 3 ಹಳ್ಳಿಗಳನ್ನು ಆಯ್ಕೆ ಮಾಡಲಾಗಿದೆ. 1) ಬೆನಕಟ್ಟಿ 2) ಕಟಗೇರಿ
3) ಐಹೊಳೆ

ಆ) ಪ್ರತಿವ್ಯಕ್ತಿಗೆ ರೂ. 2500 ರಿಂದ 3000 ದವರೆಗೆ ಅಂದಾಜಿನ ಹೆಚ್ಚುವರಿ ಅಭಿವೃದ್ಧಿ ಅನುದಾನ ಒದಗಿಸುವ ಉದ್ದೇಶವನ್ನು ಹೊಂದಿ, ರಾಜ್ಯದ ಒಟ್ಟು ಗ್ರಾಮೀಣ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಆಯಾ ತಾಲ್ಲೂಕಿನ ಗ್ರಾಮೀಣ ಜನಸಂಖ್ಯೆಗನುಗುಣವಾಗಿ ಹಾಗೂ ಡಾ॥ ಡಿ.ಎಂ. ನಂಜುಂಡಪ್ಪ ನವರ ಸಮಿತಿಯ ವರದಿಯಲ್ಲಿ ವರ್ಗೀಕರಿಸಿದ ಅತ್ಯಂತ ಹಿಂದುಳಿದ, ಹೆಚ್ಚು ಹಿಂದುಳಿದ, ಹಿಂದುಳಿದ ಮತ್ತು ತುಲನಾತ್ಮಕವಾಗಿ ಮುಂದುವರಿದ ತಾಲ್ಲೂಕುಗಳಿಗೆ ಅನುದಾನ ಹಂಚಿಕೆಯಲ್ಲಿ ಕ್ರಮವಾಗಿ 1.15, 1.10,1.05 ಮತ್ತು 1.00 ವೇಟೇಜ್ ನೀಡಿ ತಾಲ್ಲೂಕಿನ ಜನಸಂಖ್ಯೆಯನ್ನು ನಿಗದಿಪಡಿಸಲಾಗಿದೆ. ಈ ರೀತಿ ನಿಗದಿಪಡಿಸಿದ ಜನಸಂಖ್ಯೆಗೊಳಪಟ್ಟು ಸಾಮಾನ್ಯವಾಗಿ 2000 ರಿಂದ 8000 ಜನಸಂಖ್ಯೆಯಿರುವ ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ.

ಇ) ಮೇಲಿನ (ಆ) ನಲ್ಲಿ ತಿಳಿಸಿರುವ ಮಾನದಂಡದಂತೆ ಪ್ರತಿ ತಾಲ್ಲೂಕಿನ ಜನಸಂಖ್ಯೆಗೆ

ಅನುಗುಣವಾದ ಅನುದಾನವನ್ನು ನಿಗದಿಪಡಿಸಲಾಗಿದೆ. ಈ ರೀತಿ ನಿಗದಿಪಡಿಸಿದ ಅನುದಾನವನ್ನು ಅಂತಿಮವಾಗಿ ಆಯ್ಕೆಯಾದ ಎಲ್ಲಾ ಗ್ರಾಮಗಳ ಅಭಿವೃದ್ಧಿ ಯೋಜನೆಗಳನ್ನು ರೂಪಿಸಿ ಅದರಂತೆ ಅಗತ್ಯವಿರುವ ಅನುದಾನ ಬಿಡುಗಡೆ ಮಾಡಲಾಗುವುದು.

ಈ) ಗುಳೇದಗುಡ್ಡ ಮತ ಕ್ಷೇತ್ರ ವ್ಯಾಪಿಸಿರುವ 3 ತಾಲ್ಲೂಕುಗಳಲ್ಲಿ (ಬಾದಾಮಿ, ಹುನಗುಂದ ಮತ್ತು ಬಾಗಲಕೋಟೆ) ತಲಾ 1 ರಂತೆ 3 ಗ್ರಾಮಗಳಲ್ಲಿ ಆಯ್ಕೆ ಮಾಡಲಾಗಿದೆ.

ಉ) ಇಲ್ಲ.

ಶ್ರೀ ಮೇಟಿ ಹುಲ್ಲಪ್ಪ ಯಮನಪ್ಪ :– ಮಾನ್ಯ ಉಪಾಧ್ಯಕ್ಷರೆ, ಸುವರ್ಣ ಗ್ರಾಮೋದಯ ಯೋಜನೆಯಲ್ಲಿ ಗ್ರಾಮಗಳನ್ನು ಕಡಿಮೆ ಮಾಡಲು ಕಾರಣವೇನು ಎಂದು ಕೇಳಿದಾಗ ಇವರು ಗುಳೇದಗುಡ್ಡ ಮತಕ್ಷೇತ್ರ 3 ತಾಲ್ಲೂಕುಗಳಲ್ಲಿ ಬರುತ್ತದೆಂದು ಹೇಳಿದ್ದಾರೆ. ಅದು 3 ತಾಲ್ಲೂಕಿನಲ್ಲಿ ಬಂದರೆ ಅದನ್ನು ಜನಸಂಖ್ಯೆಯ ಆಧಾರದ ಮೇಲೆ ಕೊಡಬೇಕಲ್ಲವೆ? ನನ್ನ ಕ್ಷೇತ್ರದ ಜನಸಂಖ್ಯೆಯ ಆಧಾರದ ಮೇಲೆ ಬಾದಾಮಿ ತಾಲ್ಲೂಕಿನಲ್ಲಿ 47 ಸಾವಿರ ಜನಸಂಖ್ಯೆ ಬರುವ ಕಡೆ 22% ಬರುತ್ತದೆ. ಬಾಗಲಕೋಟೆ ಮತಕ್ಷೇತ್ರದಲ್ಲಿ 19.5% ಬರುತ್ತದೆ. ಹುನಗುಂದ ಮತಕ್ಷೇತ್ರದಲ್ಲಿ 61% ಬರುತ್ತದೆ. ಬಾದಾಮಿಗೆ 6 ಕೊಟ್ಟು ಗುಳೇದಗುಡ್ಡಕ್ಕೆ 1 ಕೊಟ್ಟಿದ್ದಾರೆ. ಬಾಗಲಕೋಟೆಯಲ್ಲಿ 8 ಕೊಟ್ಟು ನನ್ನ ಕ್ಷೇತ್ರಕ್ಕೆ 1 ಕೊಟ್ಟಿದ್ದಾರೆ. ಹುನಗುಂದ ಕ್ಷೇತ್ರದಲ್ಲಿ 9 ಕೊಟ್ಟು ನನಗೆ 1 ಕೊಟ್ಟಿದ್ದಾರೆ. ಇಲ್ಲಿ 41%, ಇಲ್ಲಿ 19.5% ಒಂದೊಂದು ಕೊಟ್ಟರೆ ಡಾ॥ ನಂಜುಂಡಪ್ಪ ವರದಿಯ ಪ್ರಕಾರ ಬರುತ್ತಿದೆಯೇ? ಈ ಮೂರನ್ನು ತೆಗೆದುಕೊಳ್ಳಬೇಕಾದರೆ ಅವರ ಹತ್ತಿರ ಹೋಗಿ 20 ಸಲ ಹೇಳಿಕೊಂಡರೂ ಇವತ್ತಿನವರೆಗೂ ಒಂದು ನೋಟೀಸ್‌ನ್ನು ಕಳುಹಿಸಿರುವುದಿಲ್ಲ. ಇವರು ಏನು ಒಂದು ನಾರ್ಮ್ಸ್ ಮಾಡಿದ್ದಾರೆ. ಈ ನಾರ್ಮ್ಸ್ ಪ್ರಕಾರವೇ ನನ್ನ ಕ್ಷೇತ್ರವಾರು ಪರ್ಸೆಂಟೇಜ್ ಪ್ರಕಾರ ಮಾಡಿ ಕಳುಹಿಸಿದರೂ ಕೂಡ ಅದನ್ನು ಕನ್ಸಿಡರ್ ಕೂಡ ಮಾಡಿರುವುದಿಲ್ಲ. ಮೊದಲನೆಯ ಆಯ್ಕೆಯಲ್ಲಿ ಯಾವ ಊರುಗಳು

ಸಹ ಬರಲಿಲ್ಲ. ಲಾಸ್ಟ್ ಹೋಗಿ ರಿಕ್ವೆಸ್ಟ್ ಮಾಡಿಕೊಂಡರೂ ಕೂಡ ಇವರು ಕೈ ಕೊಟ್ಟರು. ಈ ರೀತಿಯಾಗಿ ಇವರು ತಾರತಮ್ಯವನ್ನು ಮಾಡಿದರೆ ಒಂದು ಕಡೆ ನಂಜುಂಡಪ್ಪ ವರದಿಯನ್ನು ಅನುಷ್ಠಾನಕ್ಕೆ ತರುತ್ತೇವೆಂದು ಹೇಳುತ್ತಾರೆ. ಈ ರೀತಿಯಾಗಿ ಮೂರನ್ನು ಕೊಟ್ಟಿದ್ದೀರಿಲ್ಲಾ, ಯಾವ ರೀತಿಯಾಗಿ ಮಾತನಾಡಬೇಕು. ರಾಜಕೀಯವಲ್ಲ ಎಂದು ಹೇಳುತ್ತೀರಿ. ಇಲ್ಲಿ ಪ್ರತಿಯೊಂದರಲ್ಲೂ ಕೂಡ ರಾಜಕೀಯ ಮಾಡುತ್ತಾರೆ. ಎತ್ತು ಗಾಡಿಗಳನ್ನು ಕೊಡುವುದರಿಂದ ಹಿಡಿದು ಸುವರ್ಣ ಗ್ರಾಮೋದಯ ಯೋಜನೆಯಲ್ಲಿಯೂ ಕೂಡ ತಾರತಮ್ಯ ಮಾಡುತ್ತಾರೆ.

ಉಪಾಧ್ಯಕ್ಷರು :– ಮಾನ್ಯ ಸಚಿವರು ಉತ್ತರವನ್ನು ಹೇಳಲಿ.

ಶ್ರೀ ಸಿ. ಎಂ. ಉದಾಸಿ :– ಈ ಗ್ರಾಮಗಳನ್ನು ಆಯ್ಕೆ ಮಾಡುವಾಗ ಜನಸಂಖ್ಯೆಯ ಆಧಾರದ ಮೇಲೆ ಆಯ್ಕೆ ಮಾಡುವಂತೆ ಸೂಚನೆಯನ್ನು ಕೊಡಲಾಗಿತ್ತು. ಗುಳೇದಗುಡ್ಡ ತಾಲ್ಲೂಕು ಆಗದೇ ಇರುವುದರಿಂದ ಉಳಿದ ತಾಲ್ಲೂಕುಗಳನ್ನು ಗುರುತಿಸುವಂತಹ ಸಂದರ್ಭದಲ್ಲಿ ಬಾದಾಮಿ, ಬಾಗಲಕೋಟೆ ಮತ್ತು ಹುನಗುಂದ ತಾಲ್ಲೂಕುಗಳಲ್ಲಿ ಇವರ ಕ್ಷೇತ್ರವು ಬರುತ್ತಿರುವುದರಿಂದ ಇಲ್ಲಿ ಸ್ವಲ್ಪ ಮಟ್ಟಿನ ವ್ಯತ್ಯಾಸವಾಗಿರುವುದರಿಂದ ಅದನ್ನು ನಾವು ಗಮನದಲ್ಲಿಟ್ಟುಕೊಂಡು ಅವರಿಗೆ ಮೂರು ಗ್ರಾಮಗಳನ್ನು ಕೊಡಿಸುವಂತಹ ಕೆಲಸವನ್ನು ಮಾಡಿದ್ದೇವೆ. ಇದನ್ನು ಮುಂದೆ ನಾವು ಸರಿಪಡಿಸುವಂತಹ ಕೆಲಸವನ್ನು ಮಾಡುತ್ತೇವೆಂಬ ಭರವಸೆಯನ್ನು ತಮ್ಮ ಮೂಲಕ ಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ :– ನೀವು ಒಳಗಡೆ ಚರ್ಚೆ ಮಾಡಿ ನೀವು ಈ statement ನ್ನು ಸಹ ಕೊಟ್ಟಿದ್ದಿರಿ. constituency wise ಮಾಡಿ ಎಂದು ಅವರು ಹೇಳುತ್ತಿದ್ದಾರೆ. constituency wise ಜನಸಂಖ್ಯೆಯನ್ನು ತೆಗೆದುಕೊಂಡು ನೀವು ಮಾಡಬೇಕೆಂದು ಹೇಳಿದ್ದೇವೆ. ನಿಮ್ಮ ಜನಸಂಖ್ಯೆಯ ಆಧಾರದ ಮೇಲೆಯೂ ಕೂಡ ಅಲ್ಲಿ ಹೆಚ್ಚು ಬರಬೇಕಾಗುತ್ತದೆ. ಅವರಿಗೆ ಕೊಟ್ಟಿಲ್ಲವೆಂದರೆ ಅವರ ಕ್ಷೇತ್ರಕ್ಕೆ ಅನ್ಯಾಯ ಮಾಡಿದಂತಾಗುತ್ತದೆ. ಅದಕ್ಕೋಸ್ಕರವಾಗಿ ನೀವು ಅವರನ್ನು ಕರೆಸಿ ಕುಳಿತುಕೊಂಡು ಮಾತನಾಡಿಕೊಂಡು ಅವರಿಗೆ ಕೊಡಿ. ಅದನ್ನು ಬಿಟ್ಟು

ನೀವು ಬರೀ ಉತ್ತರವನ್ನು ಹೇಳಿದರೆ ಹೇಗೆ? ನಿಮಗೆ ಅನ್ಯಾಯವಾಗಿದೆ, ಅದನ್ನು ಸರಿಪಡಿಸಿಕೊಡುತ್ತೇವೆಂದು ಹೇಳಬೇಕು.

ಶ್ರೀ ಸಿ. ಎಂ. ಉದಾಸಿ :– ಮುಂದೆ ಅದನ್ನು ಸರಿಪಡಿಸಿಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ :– " ಅದನ್ನು ಸರಿಪಡಿಸಿಕೊಡುತ್ತೇವೆ, ನೀವು ಬರೆದುಕೊಡಿ" ಎಂದು ಅವರಿಗೆ ಹೇಳಬೇಕು. ಇಷ್ಟು ಉದ್ದ ಉತ್ತರವನ್ನು ಹೇಳಿದರೂ ಕೂಡ ಅವರಿಗೆ ಗೊತ್ತಾಗುವುದಿಲ್ಲ.

ಶ್ರೀ ಸಿ. ಎಂ. ಉದಾಸಿ :– ಸನ್ಮಾನ್ಯ ಮೇಟಿಯವರಿಗೆ ಇದನ್ನು ಸರಿಪಡಿಸಿ ಕೊಡುವಂತಹ ಕೆಲಸವನ್ನು ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ಅವರಿಗೆ ಭರವಸೆಯನ್ನು ಈಗಾಗಲೇ ಕೊಟ್ಟಿದ್ದೇನೆ. ಅದನ್ನು ಸರಿಪಡಿಸಿಕೊಡುತ್ತೇನೆ.

ಶ್ರೀ ಹೆಚ್. ವೈ. ಮೇಟಿ :– ಈಗಲೇ ಮಾಡಿಕೊಟ್ಟರೆ ಸಂತೋಷ.

ಶ್ರೀ ಸಿ. ಎಂ. ಉದಾಸಿ :– ಅವರ ಪರವಾಗಿಯೇ ಮಾತನಾಡಿ ಎಲ್ಲವನ್ನು ಸರಿಪಡಿಕೊಂಡಿದ್ದೇನೆ. 3 ಗ್ರಾಮಗಳನ್ನು ಕೊಡುತ್ತೇನೆಂದು ಹೇಳಿದ್ದೇನೆ. ಅದನ್ನು ನಾನು ಸರಿಪಡಿಸುತ್ತೇನೆಂದು ಹೇಳಿದ್ದೇನೆ. ಅದಕ್ಕೆ ಅವರು ಒಪ್ಪಿಕೊಂಡಿದ್ದಾರೆ.

ಯುನಿವರ್ಸಿಟಿ ಪಬ್ಲಿಕ್ ಶಾಲೆಯ ಅಭಿವೃದ್ಧಿ

293 (1977) ಶ್ರೀ ಪಾಟೀಲ್ ಎಸ್. ಎಸ್. (ಮುಂಡರಗಿ) :– ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಯುನಿವರ್ಸಿಟಿ ವತಿಯಿಂದ ನಡೆಸುತ್ತಿರುವ ಪಬ್ಲಿಕ್ ಸ್ಕೂಲ್, ಧಾರವಾಡ ಇದು ಹಣಕಾಸಿನ ತೊಂದರೆಯಿಂದಾಗಿ ಅಭಿವೃದ್ಧಿ ಕುಂಠಿತವಾಗಿರುವುದು ನಿಜವೇ;

ಆ) ಅಭಿವೃದ್ಧಿ ಹೊಂದದೇ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುವುದು ನಿಜವೇ;

ಇ) ಈ ಶಾಲೆಯಲ್ಲಿನ ಶಿಕ್ಷಕರ ವಿವರ ನೀಡುವುದು;